ಮುಖ್ಯಮಂತ್ರಿಗಳು ಆಗಲೇ ಹೇಳಿದ್ದಾರೆ. ಎಲ್ಲಾ ಪಕ್ಷದ ಮುಖಂಡರುಗಳೂ ಸಹಿತ ಬರಲಿ, ಸ್ಥಳಕ್ಕೆ ಅವರೆಲ್ಲರನ್ನೂ ಕರೆದುಕೊಂಡು ಹೋಗುತ್ತೇವೆ. ಇದರ ಬಗ್ಗೆ ಯಾವುದೇ ಸಿ.ಬಿ.ಐ. ತನಿಖೆಯ ಅವಶ್ಯಕತೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದಕ್ಕೆ ಸಿ.ಬಿ.ಐ. ತನಿಖೆ ಅಗತ್ಯವಿಲ್ಲ ಎಂದು ಹೇಳಿದರೆ ಅದು ಸರಿಯಲ್ಲ. ಇದನ್ನು ಮುಚ್ಚಿ ಹಾಕಬೇಕೆನ್ನುವ ಪ್ರಯತ್ನ ನಡೆದಿದೆ. ಯಾವ ಉದ್ದೇಶದಿಂದ ತರಾತುರಿಯಲ್ಲಿ ಕೊಟ್ಟಿದ್ದಾರೆ ಎಂಬುದು ಗೊತ್ತಾಗಬೇಕು. ಪಬ್ಲಿಕ್ ಇಂಟರೆಸ್ಟ್‌ನಲ್ಲಿ ಈ ಗುತ್ತಿಗೆಗಳನ್ನು ವಹಿಸಲಾಗಿಲ್ಲ. ಪಬ್ಲಿಕ್ ಇಂಟರೆಸ್ಟ್‌ನಲ್ಲಿ ಕೊಟ್ಟಿದ್ದರೆ, ಅವರೇ ಹೇಳಿದಂತೆ, 3-4 ತಿಂಗಳು ಇಲ್ಲಿ ಕಸರತ್ತು ಮಾಡಿ ಅದನ್ನು Short tender, ಮಾಡಬಹುದಾಗಿತ್ತು ಅಥವಾ ಪೀಸ್‌ವರ್ಕ್ ಮೇಲೆ ಕೂಡ ಬೇಕಾಗಿದ್ದರೆ, ಕರೆದು, ನೋಡಿ, ಅರ್ಹತೆ ಇದ್ದವರಿಗೆ ಕೊಡಬೇಕಾಗಿತ್ತು. ನಿಮ್ಮ ರಿಪೋರ್ಟ್‌ನಲ್ಲೂ ಕೂಡ ಇದೆ, ನೀವು ಕೂಡ ಒಪ್ಪಿಕೊಂಡಿದ್ದೀರಿ. ಲೋಕಲ್‌ನಲ್ಲಿ ಯಾರ್ಯಾರು ಕಂಟ್ರಾಕ್ಟರ್ಸ್ ಇದ್ದರೋ ಅವರಲ್ಲಿ ಯಾರಿಗೆ ಬೇಕೋ ಅವರ ಹೆಸರಿನಲ್ಲಿ ಕೊಟ್ಟು, ಇನ್ನೊಬ್ಬರು ಕಮಿಷನ್ ತೆಗೆದುಕೊಂಡು, ಬೇರೆ ಕಂಟ್ರಾಕ್ಟರ್‌ಗಳಿಂದ ಕೆಲಸ ಮಾಡಿಸಿದ್ದಾರೆ. ಈ ವಿಷಯವನ್ನು ಬೇಕಾದರೆ ಸುಳ್ಳು ಅಥವಾ ಸತ್ಯಕ್ಕೆ ದೂರವಾದುದು ಎಂದು ಹೇಳಲಿ ನೋಡೋಣ. ಸರ್ಕಾರದವರು ಎನ್‌ಕ್ವೈರಿಗೆ ತಯಾರಿಲ್ಲ. ಎನ್ನುವುದಾದರೆ ನಮಗೆ ಬೇರೆ ಏನೂ ಮಾರ್ಗವೇ ಇಲ್ಲ. ನಾವು ಧರಣಿ ಮಾಡಬೇಕಾಗುತ್ತದೆ. ನಾವು ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮಾನ್ಯ ಸದಸ್ಯರುಗಳು ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಸದನದ ಬಾವಿಯಲ್ಲಿ ಧರಣಿ ನಿಂತರು)

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಜುರಾಲಾ ಯೋಜನೆ ಬಗ್ಗೆ ಮಾನ್ಯ ಯಡಿಯೂರಪ್ಪನವರು ಕೆಲವೊಂದು ವಿವರಗಳನ್ನು ಕೇಳಿದರು. ಈಗ ಅಲ್ಲಿ ಒಟ್ಟು 559 ಎಕರೆ ಸಬ್‌ಮರ್ಜ್ ಆಗಿದೆ. ಈ ಬಗ್ಗೆ ಆಂಧ್ರ ಪ್ರದೇಶ ಸರ್ಕಾರವು ರಿಲೀಸ್ ಮಾಡಬೇಕಾದ 170 ಲಕ್ಷ ರೂಗಳಲ್ಲಿ 147 ಲಕ್ಷ ರೂ.ಗಳು ಇನ್ನೂ ರಿಲೀಸ್ ಆಗಬೇಕಾಗಿದೆ. ಮಾನ್ಯ ನಾಗರಾಜ್‌ರವರು ಮುಖ್ಯಮಂತ್ರಿಗಳ ಸಭೆಯನ್ನು ಕರೆಯಬೇಕುನ್ನತಕ್ಕಂಥ ಮಾತನ್ನು ಹೇಳಿದರು. ನಾವು ಈ ಬಗ್ಗೆ ಈಗಾಗಲೇ ಒಮ್ಮೆ ಆಂಧ್ರ ಪ್ರದೇಶ ಸರ್ಕಾರಕ್ಕೆ ತಿಳಿಸಿದ್ದೇವೆ. ಈ 'ಬಿ' ಸ್ಕೀಮ್‌ನಲ್ಲಿನ ನೀರನ್ನು ಷೇರ್ ಮಾಡಿಕೊಳ್ಳುವುದಕ್ಕೆ 2,000 ಇಸವಿಯವರೆಗೆ ಕಾಯಬೇಕಾಗಿಲ್ಲ. ಈಗಲೇ ತಾವು ಆ ಬಗ್ಗೆ ಮಾತುಕತೆಗೆ ಬರಬೇಕೆಂದು ಆಂಧ್ರ ಪ್ರದೇಶದವರಿಗೆ ನಾವು ತಿಳಿಸಿದ್ದೇವೆ. ಅವರು ಅದಕ್ಕೆ ಒಪ್ಪಿಕೊಂಡರೆ ಮೂರು ರಾಜ್ಯಗಳೂ ಸೇರಿ 'ಬಿ' ಸ್ಕೀಮ್‌ನಲ್ಲಿನ ನೀರಿನ ಬಗ್ಗೆ ಇತ್ಯರ್ಥ ಮಾಡಿಕೊಳ್ಳಲಿಕ್ಕೆ ಅನುಕೂಲವಾಗುತ್ತದೆ. ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಸಭೆ ಕರೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಪ್ರತಿಪಕ್ಷದ ನಾಯಕರು, ನಮ್ಮ ಹಿರಿಯ ನಾಯಕರಾದ ಯಡಿಯೂರಪ್ಪನವರು ಬಹಳ ಗಂಭೀರವಾದಂತಹ ವಿಚಾರಗಳನ್ನು ಹೇಳಿದಾಗ ಮುಖ್ಯಮಂತ್ರಿಗಳು ನಾವು ಕೆಲಸ ನಿಲ್ಲಿಸುವುದಿಲ್ಲ. ಹೋಗಿ ಇನ್ಸ್‌ಪೆಕ್ಷನ್

ಮಾಡೋಣ ಎಂದು ಹೇಳಿದ್ದಾರೆ. ಆದರೆ ಅನೇಕ ವಿಚಾರಗಳಿಗೆ ಮಾನ್ಯ ನಾಗೇಗೌಡರು ಇಲ್ಲಿ ಉತ್ತರ ಕೊಟ್ಟಿಲ್ಲ. ನಾವು ಅಂಕಿ ಅಂಶಗಳನ್ನು ಒದಗಿಸುತ್ತೇವೆ. ಅಂದರೂ ಕೂಡ ಅವರಿಂದ ನಾನು ಉತ್ತರವನ್ನು ತಲುಪಿಸುತ್ತೇನೆ ಎನ್ನುವಂತಹ ಒಂದು ಉತ್ತರ ಬರುತ್ತಿದೆ. ನಾವು ಕೂಡಲೇ ಈ ಪ್ರಾಜೆಕ್ಟ್ ಬಗ್ಗೆ ಯೋಜನೆಗಳ ಬಗ್ಗೆ ಏನೇನು ಅನ್ಯಾಯವಾಗಿದೆ, ಅವ್ಯವಹಾರವಾಗಿದೆ ಎಂದು ಒಕ್ಕೂರಲಿನಿಂದ ಕೇಳುತ್ತಿದ್ದೇವೆ. ಇದರ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು. ಯಾವುದೇ ರೀತಿಯಿಂದ ರಾಜ್ಯದ ಹಿತಾಸಕ್ತಿಗೆ ತೊಂದರೆಯಾಗುವ ರೀತಿಯಲ್ಲಿ ಕೆಲಸಗಳು, ಕಾಮಗಾರಿಗಳು ನಿಲ್ಲಬಾರದು. ಇದನ್ನು ನಾವು ಆಗ್ರಹಿಸಿ, ಈ ಮೂಲಕವಾದರೂ ಕೂಡ ಸರ್ಕಾರ ಕಣ್ಣು ತೆರೆಯಬೇಕೆಂದು ಹೇಳುತ್ತಾ, ನಾವು ಈ ಸಭೆಯನ್ನು ಬಿಟ್ಟು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಶ್ರೀ ಸುರೇಶ್‌ಕುಮಾರ್‌ರವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ , ಎರಡು ಸಾವಿರ ವರ್ಷದೊಳಗಾಗಿ ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಗಳನ್ನು ಈ ಸರ್ಕಾರ ಮುಗಿಸುತ್ತದೆ ಎಂಬ ನಂಬಿಕೆ ನಮಗಿಲ್ಲ. ನಾನು ಈ ಬಗ್ಗೆ ಇಲ್ಲಿ ನಿರಂತರವಾಗಿ ಒತ್ತಾಯ ಮಾಡುತ್ತಲೇ ಇದ್ದೇನೆ. ಆದರೆ ಸರ್ಕಾರ ಇದನ್ನು ಮುಗಿಸತಕ್ಕ ವ್ಯವಸ್ಥೆ ಮಾಡಿಲ್ಲ. ಆದ್ದರಿಂದ ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಪಿ.ಪ್ರಕಾಶ್ : ..... ಅವರು ಈಗ ನಾವು ಹೇಳುವುದು ಹೇಳುತ್ತೇವೆ, ನೀವು ಕೇಳುವುದಕ್ಕೆ ತಯಾರಿಲ್ಲ ಎಂದು ಹೊರಟು ಹೋಗುತ್ತಾರೆ. It is most unfair. ಮಾಡುವ ಅಲಿಗೇಷನ್ಸ್‌ಗಳು ಮಾಡಿದ ಮೇಲೆ, ಉತ್ತರ ಕೂಡ ಕೇಳುವುದಕ್ಕೆ ಇಷ್ಟಲ್ಲವೆಂದರೆ ಹೇಗೆ? ಮಾನ್ಯ ಅಧ್ಯಕ್ಷರೇ, ದಾಖಲಾತಿಗಳು ಸರಿಯಾಗಿ ಇರಬೇಕು ಎನ್ನುವ ಕಾರಣಕ್ಕಾಗಿಯೇ ನಾನು ನಿಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ, ಅವರು 459 ಕೋಟಿ ರೂ.ಗಳು ಬಿಡುಗಡೆಯಾಗಿದೆ.....

ಅಧ್ಯಕ್ಷರು : ಪ್ರಧಾನ ವಿರೋಧ ಪಕ್ಷದವರನ್ನು ಬಾವಿಯಲ್ಲಿ ನಿಲ್ಲಿಸಿಕೊಂಡೇ ಮಾತನಾಡುತ್ತಿದ್ದೀರಲ್ಲಾ.

ಶ್ರೀ ಎಂ.ಪಿ. ಪ್ರಕಾಶ್ : ಹೌದು, ಅವರು ಸದನದ ಬಾವಿಯಲ್ಲಿದ್ದಾರೆ. ಅವರು ಧರಣಿ ಹಿಂತೆಗೆದುಕೊಂಡು ಹೋಗಿ ಕುಳಿತುಕೊಳ್ಳಬೇಕೆಂದು ಅವರಿಗೆ ಕೇಳಿಕೊಳ್ಳುತ್ತಿದ್ದೇನೆ. ಅವರು ಹೇಳಿದ್ದು ದಾಖಲೆಗೆ ಹೋದ ಮೇಲೆ, ಅದನ್ನು ಸರಿಪಡಿಸಬೇಕಾದುದು ಸರ್ಕಾರದ ಕರ್ತವ್ಯ. ಆದ್ದರಿಂದ ಈಗ ಮಾತನಾಡಲು ತಮ್ಮ ಅಪ್ಪಣೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ತಾವು ಹೇಳಿದ್ದನ್ನು ನಾನು ಪೂರ್ತಿ ಒಪ್ಪಿಕೊಳ್ಳುತ್ತೇನೆ. ಅವರನ್ನು ಸದನದ ಬಾವಿಯಲ್ಲಿ ನಿಲ್ಲಿಸಿಕೊಂಡೇ ಅದನ್ನು ಹೇಳುತ್ತೀರಾ? ಧರಣಿ ಹಿಂತೆಗೆದು ಕೊಳ್ಳಲು ಅವರಿಗೊಮ್ಮೆ ಅಪೀಲ್ ಮಾಡಿಕೊಳ್ಳಬಹುದಲ್ಲವೇ?

SRI.M.P. PRAKASH : We appeal to their wise counsel and we request them. It them take their seats. ತಾವು ಧರಣಿ ಮಾಡುವುದರಿಂದಲೇ ಎಲ್ಲಾ ಆಗುವುದಿಲ್ಲ. ಈಗ ಇಡೀ ನಮ್ಮ ಸರ್ಕಾರದ ಮತ್ತು ಸಮಾಜದ ಕೆಲಸಗಳು ಆಗಬೇಕಾಗಿವೆ. ಆದ್ದರಿಂದ ಸದನದ ಪರವಾಗಿ ಹಾಗೂ ಸರ್ಕಾರದ ಪರವಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇವೆ, ಮಾನ್ಯ ನೀರಾವರಿ ಸಚಿವರು ಉತ್ತರ ಕೊಟ್ಟಿದಾರೆ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇದರ ಬಗ್ಗೆ ಉತ್ತರ ಕೊಟ್ಟಿದಾರೆ. ಕೆಲವು ಸಂದರ್ಭದಲ್ಲಿ ನಾವು ಕೊಟ್ಟಿರತಕ್ಕಂತಹ ಉತ್ತರ ನಿಮಗೆ ಸಮಂಜಸವಾಗದೇ ಇರಬಹುದು ಆದರೆ ಧರಣಿ ಮಾಡುವುದರಿಂದಲೇ, ಸರ್ಕಾರ ಹೀಗೇ ನಡೆದುಕೊಳ್ಳಬೇಕೆಂದು ಒತ್ತಾಯ ಮಾಡುವುದು, ಯಾವ ಕಾಲದಲ್ಲಿಯೂ ಆಗಿರದಂತಹ ವಿಚಾರ. ತಾವೂ ಕೂಡ ಸರ್ಕಾರ ನಡೆಸಿರತಕ್ಕಂಥವರು, ವಿರೋಧ ಪಕ್ಷದವರು ಹೇಳುವಂತಹ ಹೇಳಿಕೆಗಳನ್ನು ಹೇಳಲಿ, ಸರ್ಕಾರ ತಾನು ಹೇಗೆ ನಡೆಯಬೇಕು ಎಂಬುದನ್ನು ತಾನು ನಿರ್ಧಾರ ಮಾಡುತ್ತದೆ. ಆದ್ದರಿಂದ ಧರಣಿಯನ್ನು ಕೈಬಿಟ್ಟು ತಮ್ಮ ಸ್ವಸ್ಥಾನಗಳಿಗೆ ಹಿಂತಿರುಗಬೇಕೆಂದು ನಾನು ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಸಹಕಾರ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮೊದಲೆಲ್ಲಾ ಈ ಸದನದಲ್ಲಿ ಕಕ್ಕಿಲಾಯರವರು ಆರ್ಮುಗಂ, ಎಂ.ಎಸ್.ಕೃಷ್ಣನ್ ಮುಂತಾದವರು ಕೆಲವೊಂದು ಸಾರಿ ಈ ತರಹದ ಸನ್ನಿವೇಶ ಉದ್ಭವವಾದಾಗ ಅವರು ಮಧ್ಯೆ ಪ್ರವೇಶಿಸುತ್ತಿದ್ದರು. ಅವರು ಏನೋ ಒಂದು ಮಾಡಿ ಡಿಫ್ಯೂಸ್ ಮಾಡುತ್ತಿದ್ದರು. ಈಗ ಅವರು ಹೊರಟು ಹೋಗಿ ಬಿಟ್ಟರು, ಇವರು ನಿಂತುಕೊಂಡು ಬಿಟ್ಟಿದ್ದಾರೆ, ಮಧ್ಯೆ ಮಾತನಾಡುವವರು ಯಾರೂ ಇಲ್ಲ. ನೀವು ಅಪೀಲ್ ಕೂಡ ಸರಿಯಾಗಿ ಮಾಡುವುದಿಲ್ಲ, ನಾನೇನು ಮಾಡಬೇಕು. ಎಂಬುದೇ ಗೊತ್ತಾಗುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : (ಸದನದ ಬಾವಿಯಿಂದ ವಾಪಸ್ ಸ್ವಸ್ಥಾನಕ್ಕೆ ಹಿಂತಿರುಗಿ) : ಮಾನ್ಯ ಅಧ್ಯಕ್ಷರೇ, ಇಲ್ಲಿ ವಿಶೇಷವಾದಂತಹ ಸನ್ನಿವೇಶ ಏನೆಂದರೆ ಇದು ನಿಮಾಗೂ ಇಕ್ಕಟ್ಟಿನ ಪರಿಸ್ಥಿತಿ ತಂದೊಡ್ಡಿರಬಹುದು.

ಅಧ್ಯಕ್ಷರು : ನಮಗೇನೂ ಇಕಟ್ಟು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾವು ಈ ಸದನದಲ್ಲಿ ಅನೇಕ ಸಾರಿ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಿದಾಗ ಸರ್ಕಾರದವರು ಅದಕ್ಕೆ ಆಧಾರವನ್ನು ಕೇಳುತ್ತಾರೆ. ಈಗ ನಾವು ಮಾಡುತ್ತಿರುವ ಆರೋಪಕ್ಕೆ ಒಂದು ಆಧಾರ ಅಂದಾಜು ಸಮಿತಿಯನ್ನು ವರದಿಯ ರೂಪದಲ್ಲಿ ಈ ಸದನದಲ್ಲಿ ಈಗಾಗಲೇ ಮಂಡಿಸಿಯಾಗಿದೆ. ನಾವು ಆ ಆಧಾರದ

ಮೇಲೆಯೇ ಅದನ್ನು ಮಾಡಿದ್ದುದು. ನಿಮಗೆ ನಮ್ಮ ಹೇಳಿಕೆಯ ಮೇಲೆ ನಂಬಿಕೆ ಇಲ್ಲ. ನಾವು ಹೇಳಿದ್ದು ಸತ್ಯಕ್ಕೆ ದೂರವಾದುದು ಎಂದು ನಿಮಗೆ ಮನವರಿಕೆ ಆಗಿತ್ತು. ಈ ಸದನದಲ್ಲಿ ಮಂಡಿಸಿ ಈ ಪ್ರಕರಣ ಸಿ.ಬಿ.ಐ. ತನಿಖೆಯಾಗಬೇಕೆಂದು ಸಲಹೆ ಕೊಟ್ಟಿದ್ದಾರೆ, ಎರಡೂ ಸರ್ಕಾರಿ ಆದೇಶಗಳ ಮೇಲೆ ಎನ್‌ಕ್ವೈರಿ ಮಾಡಲು ಸಿ.ಬಿ.ಐ.ಗೆ ಒಪ್ಪಿಸಿ ಎಂದು ಸಮಿತಿ ಶಿಫಾರಸ್ಸು ಮಾಡಿದೆ. ಎವಿಡೆನ್ಸ್ ರೂಪದಲ್ಲಿ ಡಾಕ್ಯುಮೆಂಟ್ ಇದೆ, ಸಿ.ಬಿ.ಐ.ಗೆ ಒಪ್ಪಿಸಬೇಕೆಂಬ ಸಲಹೆಯೂ ಕೂಡ ಬಂದಿರುವಾಗ ಸರ್ಕಾರ ಇದಕ್ಕೆ ಒಪ್ಪಲೇಬೇಕು. ಇಷ್ಟೆಲ್ಲಾ ಇದ್ದರೂ ಕೂಡ ಸರ್ಕಾರದವರು ಸಿ.ಬಿ.ಐ.ಗೆ ರೆಫರ್ ಮಾಡುವುದಕ್ಕೆ ತಯಾರಾಗಿಲ್ಲ ಎಂದರೆ ಹೇಗೆ? ನೀವು ಪದೇ ಪದೇ ಸಿ.ಬಿ.ಐ ಮೇಲೆ ಪ್ರೀತಿ ಇಡತಕ್ಕವರಲ್ಲವೇ? 2 ಕೋಟಿ ರೂ.ಗಳಿಗೆಲ್ಲಾ ಸಿ.ಬಿ.ಐ.ಗೆ ರೆಫರ್ ಮಾಡಿದ್ದೀರಿ. ಜಾಲಪ್ಪನವರದ್ದು ರೆಫರ್ ಮಾಡಿದ್ದಿರಿ. ಇದೂ ಕೂಡ ರೆಫರ್ ಆಗಲಿ.

(ಮಾನ್ಯ ವಿರೋಧ ಪಕ್ಷದ ನಾಯಕರು ಪುನಃ ಸದನದ ಬಾವಿಯಲ್ಲಿ ಧರಣಿ ನಿಂತರು)

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆ ತಮ್ಮ ಮುಖಂಡತ್ವದಲ್ಲಿಯೇ ಎಲ್ಲಾ ಪಕ್ಷದ ಮುಖಂಡರು ಹೋಗಿ ಸ್ಥಳಕ್ಕೆ ಭೇಟಿ ನೀಡಲಿ. ಇದರ ಬಗ್ಗೆ ಹೆಚ್ಚು ಚರ್ಚೆ ಮಾಡಿ ಕೆಲಸ ಹಾಳಾಗುವುದು ಬೇಡ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಎಲ್ಲರನ್ನೂ ಅಲ್ಲಿಗೆ ಭೇಟಿ ನೀಡುವ ಸಲುವಾಗಿ ಆಹ್ವಾನಿಸಿದ್ದಾರೆ. ತಾವು ಒಂದು ದಿನಾಂಕ ನಿಗದಿ ಮಾಡಿ, ಆ ಸ್ಥಳಕ್ಕೆ ಭೇಟಿ ನೀಡೋಣ. ಅಲ್ಲಿಗೇ ಭೇಟಿ ನೀಡಿ ಪ್ರತಿಯೊಂದನ್ನೂ ಕೂಡ ಹೋಗಿ ನೋಡಿಕೊಂಡು ಬರೋಣ. ಅಲ್ಲಿ ನಡೆದಿರುವ ಕೆಲಸಗಳನ್ನು ನೋಡಿದರೆ ಅವರು ಖಂಡಿತವಾಗಿಯೂ ಕನ್‌ವಿನ್ಸ್ ಆಗುತ್ತಾರೆ. ಅವರು ಅದನ್ನು ನೋಡದಿರುವುದರಿಂದ ಕನ್‌ವಿನ್ಸ್ ಆಗುತ್ತಿಲ್ಲ. ಸರ್ಕಾರ ಕೆಲಸ ಕೊಡಬೇಕೆಂದು ಒಂದು ತೀರ್ಮಾನ ತೆಗೆದುಕೊಂಡು ಪ್ರೊಸಿಸೀಜರ್ ಅಡಾಪ್ಟ್ ಮಾಡಿಕೊಂಡು ಸರ್ಕಾರಿ ಆದೇಶ ಹೊರಡಿಸಿ ಗುತ್ತಿಗೆಗಳನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು : ನಿಮ್ಮಲ್ಲಿ ನಾನು ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ, ನಾವು ಇನ್ನೂ ಲ್ಯಾಂಡ್ ರೆವಿನ್ಯೂ ಬಿಲ್ ಒಂದನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ, ಇದೊಂದು ಬಹಳ ಪ್ರಮುಖ್ಯವಾದ ವಿಧೇಯಕ. ಕೃಷಿ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ ನೀಡಬೇಕಾಗಿದೆ. ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಅದಕ್ಕಾಗಿ ಕಾಯುತ್ತಿದ್ದಾರೆ. ಸಿ.ಬಿ.ಐ. ಸ್ಯಾಕ್ರೋಸ್ಯಾಂಟ್ ಎಂದು ಏಕೆ ತಿಳಿದುಕೊಳ್ಳುತ್ತೀರಿ? Sri Moily, you just think over whether should you stick to this stand or would you reconsider this. It is only to carry on the business. But, for that, we don't have any other interest.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರೇ ಸದಸ್ಯರಲ್ಲಿ ಕೇಳಿಕೊಳ್ಳುತ್ತಿದ್ದೇನೆ, ತಾವು ಈ ವಿಚಾರವನ್ನು ಸಮಗ್ರವಾಗಿ ಚರ್ಚೆ ಮಾಡಿದ್ದೀರಿ. ಈ ಹಿಂದೆ ಕೂಡ ಇದರ ಬಗ್ಗೆ ಚರ್ಚೆ ಮಾಡಿದ್ದೀರಿ. ತಾವೇ ಹೇಳಿದ ಹಾಗೆ

ಕೆಲಸ ನಿಲ್ಲಕೂಡದು ಎಂದು ನಿಮ್ಮ ಬಯಕೆ. ಕೆಲಸ ನಿಲ್ಲಿಸುವುದಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಕೆಲಸ ನಿಲ್ಲಬಾರದು ಎಂದು ಹೇಳುವುದು, ಕೆಲಸ ನಾವು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಇದರ ಬಗ್ಗೆ ಕೊಡಬೇಕಾದ ಹಣ ಯಾವುದು ಇದೆ ಅದನ್ನು ಕೊಡುವುದಕ್ಕೆ ಕ್ರಮತೆಗೆದುಕೊಳ್ಳುತ್ತೇವೆ. ಅವರ ಮೂರು ಬೇಡಿಕೆಗಳಲ್ಲಿ ಎರಡು ಬೇಡಿಕೆ ಯಾವುದು ಇದೆ ಅದನ್ನು ಸರ್ಕಾರ ನೇರವಾಗಿ ಒಪ್ಪಿದೆ. ನಾವು ಅದನ್ನು ಖಂಡಿತವಾಗಿ ಕೆಲಸ ನಿಲ್ಲಿಸುವುದಿಲ್ಲ. ಖಂಡಿತವಾಗಿ ಕೆಲಸ ಮುಂದುವರೆಸುತ್ತೇವೆ, ಕೊಡಬೇಕಾದ ಹಣ ಯಾವುದು ಇದೆ, ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತೇವೆ. ಇನ್ನು ಮೂರನೇ ಪ್ರಮುಖವಾದ ಬೇಡಿಕೆ ಸಿಬಿಐ ತನಿಖೆಗೆ ಸಂಬಂಧಪಟ್ಟ ಬೇಡಿಕೆ. ಈ ಬೇಡಿಕೆ ಸದನದ ಸಮಿತಿ ವರದಿ ಬಗ್ಗೆ ಸಲ್ಪ ಮಟ್ಟಿಗೆ ಚರ್ಚೆಯಾಗಿದೆ. ಇದರ ಬಗ್ಗೆ ಮಾತಾಡುತ್ತಿದ್ದಂತಹ ಸಂದರ್ಭದಲ್ಲಿ ಹಿಂದೆ ನಡೆದ ಕೆಲವು ಘಟನೆಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಇದರ ಬಗ್ಗೆ ನಾನು ಹೆಚ್ಚಿಗೆ ವ್ಯಾಖ್ಯಾನ ಮಾಡುವುದಿಲ್ಲ. ಒಂದು ಗಮನಕ್ಕೆ ತರುತ್ತಿದ್ದೇನೆ, ಯಾವ ಸದನ ಸಮಿತಿಯ ವರದಿಯ ಆಧಾರದ ಮೇಲೆ ಸಿಬಿಐ ತನಿಖೆ ಮಾಡಬೇಕೆಂದು ಕೇಳುತಿದ್ದಾರೆ, ಅದನ್ನೂ ಕೂಡ ತಾವು ಇದನ್ನು ಓದಿದ್ದೀರಿ ಎಂದು ಭಾವಿಸಿದ್ದೇನೆ. ಅದರಲ್ಲಿ ಕೊನೆಯಲ್ಲಿ ಅವರು ಏನು ಹೇಳುತ್ತಾರೆಂದು ಬಹುಶಃ ನನ್ನ ಮಿತ್ರರು ಒದಿದ್ದಾರೆಂದು ಕಾಣುತ್ತದೆ. ಈ ಕರ್ನಾಟಕದ ಇತಿಹಾಸದಲ್ಲಿ ಇದರ ಬಗ್ಗೆ ಅನೇಕ ವದಂತಿಗಳು, ಕಟ್ಟು ಕಥೆಗಳು ಅಡಗಿರುತ್ತವೆ. Sir, this was the last para. This was the recommendatory para of the committee. Let me tell you. ಕರ್ನಾಟಕ ಇತಿಹಾಸದಲ್ಲಿ ಇದು ಒಂದು ಪ್ರಮುಖವಾದ ಯೋಜನೆಯಗಿದೆ. Absolutely true : ಈ ಬಗ್ಗೆ ಅನೇಕ ವದಂತಿಗಳು, ಕಟ್ಟು ಕಥೆಗಳು ಅಡಗಿರುತ್ತವೆ. ಇವುಗಳಿಗೆಲ್ಲಾ ಪೂರ್ಣ ವಿರಾಮ ನೀಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆದುದರಿಂದ ಈ ಯೋಜನೆ ಬಗ್ಗೆ ಸಿಬಿಐ ತನಿಖೆಯಿಂದ ಸಮಗ್ರ ನಡೆಸುವಂತೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಾರೆ. ಕಟ್ಟು ಕಥೆಗೆ ವದಂತಿಗೆ ಪೂರ್ಣ ವಿರಾಮ ಹಾಕಬೇಕೆಂದು ಹೇಳುತ್ತಿರತಕ್ಕಂತಹ ಹಿನ್ನೆಲೆಯಲ್ಲಿ ಇದನ್ನು ಸಿಬಿಐ ತನಿಖೆಗೆ ಕೊಡಿ ಎಂದು ಹೇಳತಕ್ಕಂಥದ್ದು ಅವರು ಮಾಡಿರತಕ್ಕಂತಹ ಶಿಫಾರಸ್ಸು; ಸರ್ಕಾರದವರು ಒಂದು ಜವಾಬ್ದಾರಿಯುತ ಸ್ಥಾನದಲ್ಲಿದ್ದು ಕಟ್ಟು ವಂದತಿಗಳಿಗೆ ಸಂಬಂಧಪಟ್ಟಂತೆ ಸಮಿತಿಯ ಸದಸ್ಯರು ಹೇಳಿ ಆದ ಮೇಲೆ ಕಟ್ಟುಕಥೆಗೆ ವದಂತಿಗೆ ಪೂರ್ಣ ವಿರಾಮ ಹಾಕುವುದಕ್ಕೆ ಸಿಬಿಐ ತನಿಖೆಯಾಗಬೇಕು. ಕಟ್ಟು ಕಥೆ ವದಂತಿಗಳಿಗೆ ಪೂರ್ಣ ವಿರಾಮ ಹಾಕಬೇಕಾದರೆ. ವರದಿ ಆಧಾರದ ಮೇಲೆ ಪೂರ್ಣ ವಿರಾಮ ಅಲ್ಲಿ ಹಾಕಬೇಕು. ಇದು ಒಂದು ಮಾತು. ನಾನು ಇದನ್ನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇಡೀ ರಿಪೋರ್ಟ್ ಕಡೆಯಾದಾಗಿ ಹೇಳತಕ್ಕಂಥದ್ದು ಎಂದರೆ, ಇದಕ್ಕೆ ಬೇಕಾದಷ್ಟು ವದಂತಿಗಳಿವೆ, ಕಟ್ಟು ಕಥೆಗಳು ಇವೆ, ಇದಕ್ಕೆ ಪೂರ್ಣ ವಿರಾಮ ಹಾಕಿ ಸಮಿತಿ ಸದಸ್ಯರೂ ಕೂಡ ಈ ವಿಚಾರ ಪೂರ್ಣವಾಗಿ ಇದೆ, ಬೇಕಾದಷ್ಟು ಕಟ್ಟು ಕಥೆ ಇದೆ, ಕಟ್ಟು ಕಥೆ ಇರುವುದರಿಂದ ಅವರ ಚಿಂತನೆಯಲ್ಲಿ ಅದನ್ನು ಸಿಬಿಐ ತನಿಖೆಗೆ ವಹಿಸಬೇಕೆಂದು ಹೇಳಿದ್ದಾರೆ ಸರ್ಕಾರ ಜವಾಬ್ದಾರಿ ಸ್ಥಾನದಲ್ಲಿ ಇದ್ದು ವದಂತಿಗಳಿಗೆ ಕಟ್ಟು ಕಥೆಗಳಿಗೆ ನಾವು ಸಿಬಿಐ ತನಿಖೆಗೆ ಒಳಪಡಿಸಬೇಕೆಂದು ಹೇಳಿದಾಗ.....

ಶ್ರೀ ಎಂ.ಪಿ. ಪ್ರಕಾಶ್ : ಅವರೂ ಕೂಡ ಸತ್ಯಾಸತ್ಯತೆ ನಂಬಿಲ್ಲ. ಕಟ್ಟು ಕಥೆ ಎಂದು ಅವರು ಹೇಳಿದ್ದಾರೆ. ಕಟ್ಟು ಕಥೆ ಇರುವುದರಿಂದ ವಿರಾಮ ಹಾಕಿ ಎಂದು ಹೇಳಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ : ಜವಾಬ್ದಾರಿಯುತ ಸರ್ಕಾರ ಯಾವುದೋ ಒಂದು ಸಂದರ್ಭದಲ್ಲಿ ಈ ಸದನದ ಸಮಿತಿ ರಿಪೋರ್ಟ್ ತೆಗೆದುಕೊಂಡು ಅವರು ಹೇಳಿದ್ದಾರೆ. ಆದ್ದರಿಂದ ಒಪ್ಪಿ ಎಂದು ಹೇಳುತ್ತಿದ್ದಾರೆ. ಅವರು ಹೇಳತಕ್ಕಂಥದ್ದು ಏನು ಸರ್ಕಾರ ಜವಾಬ್ದಾರಿ ಸ್ಥಾನದಲ್ಲಿ ಇದ್ದು ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ.

ಇದು ಸಿಬಿಐ ತನಿಖೆಗೆ ಒಪ್ಪಿಸತಕ್ಕಂತಹ ವಿಚಾರ ಅಲ್ಲ. ಅವರು ಹೇಳಿದ್ದಾರೆ, ಏನು ನಡೆದಿದೆ ಎಂದು ಮಾನ್ಯ ಮುಖ್ಯಮಂತ್ರಿಗಳೂ ಒಪ್ಪಿದ್ದಾರೆ. ತಾವು ದಯಮಾಡಿ ವಿರೋಧಪಕ್ಷದ ನಾಯಕರು ನಿಮಗೆ ಮಾತನಾಡುವುದಕ್ಕೆ ಇರುವ ಅಧಿಕಾರವನ್ನು ಯಾರೂ ಇಲ್ಲಿ ಮೊಟಕು ಮಾಡಲಿಲ್ಲ. ಮಾನ್ಯ ಸಭಾಧ್ಯಕ್ಷರು ಸಂಪೂರ್ಣವಾಗಿ ಅಧಿಕಾರ ಕೊಟ್ಟಿದ್ದಾರೆ. When you had your say, the government had its way also. Your should accept it now. If you cannot accept it and coming to the well of the House, wal I think, if that is the case, we cannot carry on with the further proceedings of this house. ಆದ್ದರಿಂದ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ವೀರಪ್ಪ ಮೊಯಿಲಿಯವರು, ಮಂತ್ರಿಗಳಾದ ಶ್ರೀಮಾನ್ ಖರ್ಗೆಯವರು, ಮತ್ತು ತಿಮ್ಮಾಪ್ಪನವರು ನೀವೂ ಕೆಲಸ ಮಾಡಿದ್ದೀರಿ. ಬಹಳ ಘಟಾನುಘಟಿಗಳು ನೀವೇ ಈ ಕೆಲಸ ಮಾಡಿದರೆ ಸರ್ಕಾರ ನಡೆಸುವುದು ಹೇಗೆ ಎಂದು ತಾವು ತೀರ್ಮಾನ ಮಾಡಿ.

(ಸದನವು 5.15 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 5.30 ಕ್ಕೆ ಸೇರಲು ನಿರ್ಧರಿಸಿತು.)

(ಸದನವು ಸಂಜೆ 5.40ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್)ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

(ಕಾಂಗ್ರೆಸ್ ಪಕ್ಷದ ಸದಸ್ಯರು ಸದನ ಬಾವಿಯಲ್ಲಿ ಧರಣಿ ನಡೆಸುತ್ತಿದ್ದರು.)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರು ಧರಣಿ ಕುಳಿತ್ತಿದ್ದಾರೆ. ನನ್ನ ಒಂದು ಸಲಹೆ ಎಂದರೆ, ಎಲ್ಲಾ ವಿರೋಧ ಪಕ್ಷದ ನಾಯಕರು ಅಲ್ಲಿಗೆ ಹೋಗಿ ಸ್ಥಳ ಪರಿಶೀಲನೆ ಮಾಡಿ, ಅಲ್ಲಿ ಏನಾದರೂ ಅವ್ಯವಹಾರ ನಡೆದಿದೆ ಎಂದು ಕಂಡುಬಂದರೆ ಮತ್ತೆ ಚರ್ಚೆ ಮಾಡಬಹುದು ಎಂದು ಮಾನ್ಯ ಮುಖ್ಯ ಮಂತ್ರಿಗಳು ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಒಪ್ಪಿ ಈಗ ಧರಣಿಯನ್ನು ಮುಗಿಸಬಹುದು ಎಂದು ನನ್ನ ಒಂದು ಸೂಚನೆ ಮುಖ್ಯ ಮಂತ್ರಿಗಳು ಏನು ಹೇಳಿದ್ದಾರೆ, ಅದರ ಪ್ರಕಾರ ಧರಣಿಯನ್ನು ಹಿಂತೆಗೆದುಕೊಳ್ಳಬೇಕು ಮತ್ತು ಸ್ಥಳ ಪರಿಶೀಲನೆಗೆ ತಾವು ಯಾವುದಾದರೂ ಒಂದು ತಾರೀಖನ್ನು ನಿಗದಿ ಮಾಡಿದರೆ, ಆ ದಿವಸ ಎಲ್ಲರೂ ಹೋಗಿ ನೋಡಿಕೊಂಡು ಬರಹುದು. ಪರಿಶೀಲನೆ ಮಾಡಿ, ಏನಾದರೂ ಲೋಪದೋಷಗಳು ಕಂಡುಬಂದರೆ ಮತ್ತೆ ಇಲ್ಲಿ ಚರ್ಚೆ ಮಾಡುವುದಕ್ಕೆ